ಇ) ದುರಸ್ತಿ ಕಾಮಗಾರಿಯನ್ನು ಅನುದಾನಕ್ಕನುಗುಣವಾಗಿ ಸಾಧ್ಯವಾದಷ್ಟು ತ್ವರಿತವಾಗಿ ಪೂರ್ಣಗೊಳಿಸಲಾಗುವುದು.

ವಿಶ್ವಬ್ಯಾಂಕ್ ನೆರವಿನ ಬಗ್ಗೆ

226-ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ (ಕುಡಿಯುವ ನೀರು ಮತ್ತು ಗ್ರಾಮೀಣಾಭಿವೃದ್ಧಿ) ವಿಶ್ವಬ್ಯಾಂಕ್ ನೆರವಿನಿಂದ ತೆಗೆದುಕೊಳ್ಳಲಿರುವ ಗ್ರಾಮೀಣ ಪ್ರದೇಶದ ಹಳ್ಳಿಗಳಾವುವು(ವಿವರ ನೀಡುವುದು) ?

ಆ) ಸದರಿ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಸಚಿವರು) :

ಅ) ವಿಶ್ವಬ್ಯಾಂಕಿನ ಯೋಜನೆಯು ಮೊದಲನೆಯ ಹಂತದಲ್ಲಿ 30 ಗ್ರಾಮಗಳನ್ನು ತೆಗೆದುಕೊಳ್ಳಲಾಗಿದ್ದು, ಗ್ರಾಮಗಳ ಹೆಸರುಗಳನ್ನು ಕೆಳಗೆ ಕೊಡಲಾಗಿದೆ.

ಕೆ.ಆರ್.ಪೇಟೆ ತಾಲ್ಲೂಕು : ಕಿಕ್ಕೇರಿ, ಸಿಂದಘಟ್ಟ, ವಿಠಲಾಪುರ, ಬೂಕಿನ ಕೆರೆ.

ಮದ್ದೂರು ತಾಲ್ಲೂಕು : ಕಾವಡ್ಲೆ, ಕೆಸ್ತೂರು, ಕೊಪ್ಪ, ಕಾಡುಕೋಡನಹಳ್ಳಿ.

ಮಳವಳ್ಳಿ ತಾಲ್ಲೂಕು : ಹಸ್ಕೂರು, ದನಗೂರು, ಪುರಿಗಾಲಿ, ಮರಕಾಲ, ಕಾಲ್ಕುಣಿ.

ಮಂಡ್ಯ ತಾಲ್ಲೂಕು : ಬೂದನೂರು, ಕೆರೆಗೋಡು, ಸಾತನೂರು, ಹೊಳಲು, ಕೋತಟ್ಟಿ.

ಪಾಂಡವಪುರ ತಾಲ್ಲೂಕು : ಹಿರೆಮರಳಿ, ಕೆನ್ನಾಲು, ಮೇಲುಕೋಟೆ, ಹಳೀಬೀಡು.

ಶ್ರೀರಂಗಪಟ್ಟಣ : ನೆರಳೆ ಕೆರೆ, ಸುಬ್ಬನಕುಪ್ಪೆ, ಮಹದೇವಪುರ, ಕೆ.ಶಟ್ಟಿಹಳ್ಳಿ.

ನಾಗಮಂಗಲ ತಾಲ್ಲೂಕು : ದೇವಲಾಪುರ, ಎ.ನಾಗತೀಹಳ್ಳಿ, ತುಪ್ಪದಮಡು, ಭೀಮನಹಳ್ಳಿ.

ಎರಡನೆ ಹಂತದ ಯೋಜನೆಯಲ್ಲಿ 70 ಹಳ್ಳಿಗಳನ್ನು ತೆಗೆದುಕೊಳ್ಳಲಾಗುವುದು.

ಆ) ವಿಶ್ವಬ್ಯಾಂಕ್‌ನಿಂದ ಯೋಜನೆಯು ಇನ್ನೂ ಆಖರಾಜು ಆಗಬೇಕು.

ಹೇಮಾವತಿ ನಾಲೆ ಕಾರ್ಯದ ಬಗ್ಗೆ

227 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ನಾಲೆ ಕೆಲಸ ಯಾವಾಗ ಮುಗಿಯುವುದು?

ಆ) ನಾಗಮಂಗಲ ತಾಲ್ಲೂಕಿಗೆ ಹೇಮಾವತಿ ನೀರನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಹೇಮಾವತಿ ನಾಲಾ ಕೆಲಸಗಳನ್ನು 1996-97ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಆ) ನಾಗಮಂಗಲ ತಾಲ್ಲೂಕಿಗೆ ಹೇಮಾವತಿ ಎಡದಂಡೆ ನಾಲೆಯಿಂದ 1993-94ರಲ್ಲೂ ಹಾಗೂ ನಾಗಮಂಗಲ ಉಪನಾಲೆಯಿಂದ 1996-97ರಲ್ಲೂ ನೀರೊದಗಿಸುವ ಕಾರ್ಯಕ್ರಮವಿದೆ.

ಪ್ರವಾಸೋದ್ಯಮ ಇಲಾಖೆಯಿಂದ ಹೋಟೆಲ್ ಕಾಟೇಜ್‌ಗಳ ಸ್ಥಿತಿಗಳ ಬಗ್ಗೆ

229 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ವತಿಯಿಂದ ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಹೋಟೆಲ್, ಕಾಟೇಜ್ ಮುಂತಾದವುಗಳ ಸಂಖ್ಯೆ ಎಷ್ಟು (ಹೆಸರು, ಸ್ಥಳ ಮುಂತಾದವುಗಳ ವಿವರಗಳನ್ನು ನೀಡುವುದು)?

ಆ) ಅವುಗಳ ಮೇಲ್ವಿಚಾರಣೆ ಸಮರ್ಪಕವಾಗಿಲ್ಲದಿರುವುದು ನಿಜವೇ?

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಈ) ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಹೊಸದಾಗಿ ಕಾಟೇಜ್ ನಿರ್ಮಿಸುವ ಯೋಜನೆ ಸರ್ಕಾರಕ್ಕಿದೆಯೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು):

ಅ) ಪ್ರವಾಸೋದ್ಯಮ ಇಲಾಖೆಯು ರಾಜ್ಯದಲ್ಲಿ ಸ್ಥಾಪಿಸಿರುವ ಹೋಟೆಲ್, ಕಾಟೇಜುಗಳು ಒಟ್ಟು ಒಂಭತ್ತು.

1) ಪ್ರವಾಸಿ ಕುಟೀರ, ಹಳೇಬೀಡು.

2) ಪ್ರವಾಸಿ ಕುಟೀರ, ಕಾರ್ಕಳ.

3) ಪ್ರವಾಸ ಕುಟೀರ, ಮೂಡಬಿದ್ರೆ

4) ಪ್ರವಾಸ ಕುಟೀರ, ಗೋಕರ್ಣ.

5) ಪ್ರವಾಸ ಗೃಹ, ಐಹೊಳೆ.

6) ಪ್ರವಾಸ ಗೃಹ, ದೇವರಾಯನದುರ್ಗ

7) ಪ್ರವಾಸಿ ಗೃಹ, ಜೋಗಜಲಪಾತಕ

8) ಪ್ರವಾಸಿ ಗೃಹ, ತಲಕಾವೇರಿ

9) ಹೆದ್ದಾರಿ ಸೌಲಭ್ಯ, ಎಡಿಯೂರು.

ಆ) ಇವುಗಳನ್ನು ಇನ್ನೂ ಉತ್ತಮಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಸಂಪನ್ಮೂಲಗಳು ಸೀಮಿತವಾಗಿರುವುದರಿಂದ ಈ ರೀತಿ ನಿರ್ಮಿಸಲಾಗಿರುವ ಸೌಲಭ್ಯಗಳನ್ನು ಗುತ್ತಿಗೆ ಮತ್ತ ಲೈಸನ್ಸ್ ಆಧಾರದ ಮೇಲೆ ಖಾಸಗಿಯವರಿಗೆ ನೀಡಲು ಅಥವಾ ಈ ಎಲ್ಲಾ ಸೌಲಭ್ಯಗಳನ್ನು ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.